ಓ ಎಸ್ ನಂ.43/2023

ಡಿ.ಡಬ್ಲ್ಯೂ-1 ಸತೀಶ ತಂದೆ ಬಸವರಾಜ ಪಾಟೀಲ್

**(ಇಂದು ದಿನಾಂಕಃ 27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ೩ನೇ ಪ್ರತಿವಾದಿ ಪರ ಶ್ರೀ ಎಸ್ ಕೆ ಪಿ ವಕೀಲರಿಂದ.

ನಾನು ಈ ದಾವೆಯನ್ನು ಶಿವರಾಜ, ಮೇಘರಾಣಿ ಮತ್ತು ಬಸವರಾಜರವರ ವಿರುದ್ದ ಹಾಕಿರುತ್ತೇನೆ. ೩ನೇ ಪ್ರತಿವಾದಿಯ ವಿರುದ್ದ ಏಕೆ ಕೇಸು ಹಾಕಿರುತ್ತೀರಿ ಎಂದರೆ ಸಾಕ್ಷಿಯು ನಾವು ಈಗಾಗಲೆ ಪಾಲು ಮಾಡಿಕೊಂಡಿರುತ್ತೇವೆ ಪ್ರದೀಪ್ ರವರು ಮೇಘರಾಣಿರವರ ಜೊತೆಗೆ ವ್ಯವಹಾರ ಮಾಡಿದ್ದರಿಂದ ನಾನು ಮೇಘರಾಣಿರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ನಾನು ಡಿಗ್ರಿ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ೨ನೇ ಪ್ರತಿವಾದಿ ಪ್ರದೀಪ್ ೩ನೇ ಪ್ರತಿವಾದಿಯಾದ ಮೇಘರಾಣಿರವರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ. ಸಾಕ್ಷಿಯು ಅದರ ಬಗ್ಗೆ ನಮಗೆ ಮಾಹಿತಿ ನೀಡಿಲ್ಲ ಎನ್ನುತ್ತಾರೆ. ೧ನೇ ಪ್ರತಿವಾದಿ ನಿಪಿ-೩ ರಂತೆ ನನಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನಗೆ ೧ನೇ ಪ್ರತಿವಾದಿ ೩ ಎಕರೆ ಜಮೀನಿನ ಖರೀದಿ ಪತ್ರ ಮಾಡಿಕೊಟ್ಟಿರುತ್ತಾನೆ. ಸದರಿ ಖರೀದಿ ಪತ್ರ ರೂ.೩,೮೦,೦೦೦/- ಗೆ ಆಗಿರುತ್ತದೆ. ೨ನೇ ಪ್ರತಿವಾದಿ ೪ನೇ ಪ್ರತಿವಾದಿಗೆ ಕೂಡಾ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ನೀಡದೆ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ.

೨. ೨ನೇ ಪ್ರತಿವಾದಿ ೪ನೇ ಪ್ರತಿವಾದಿಗೆ ಸರ್ವೆ ನಂಬರ ೨೩/೨ ರಲ್ಲಿ ೪ ಎಕರೆ ೩೫ ಗುಂಟೆ ಜಮೀನನ್ನು ರೂ.೧೭,೫೫,೦೦೦/- ಗೆ ಮಾರಾಟ ಮಾಡಿದ ಬಗ್ಗೆ ಖರೀದಿ ಪತ್ರ ಈಗ

ನನಗೆ ತೋರಿಸಿದ ದಾಖಲೆಯಂತೆ ಆಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ನಿಡಿ-೫೮ ಎಂದು ಗುರುತಿಸುವ ಸಲುವಾಗಿ ಗುರುತಿಸಲಾಯಿತು.

೩. ನಮ್ಮ ಮನೆತನಕ್ಕೆ ಸರ್ವೆ ನಂಬರ ೫೯ ರಲ್ಲಿ ೧೮ ಎಕರೆ ೫ ಗುಂಟೆ ಜಮೀನು ಮತ್ತು ಸರ್ವೆ ನಂಬರ ೬೦/೨ ರಲ್ಲಿ ೧೫ ಎಕರೆ ೨೭ ಗುಂಟೆ ಜಮೀನು ಮತ್ತು ಸರ್ವೆ ನಂಬರ ೨೩ ರಲ್ಲಿ ೨೩ ಎಕರೆ ೩೩ ಗುಂಟೆ ಜಮೀನು ಮತ್ತು ಸರ್ವೆ ನಂಬರ ೬೩ ರಲ್ಲಿ ೩೫ ಗುಂಟೆ ಜಮೀನು ಮತ್ತು ಊರಿನಲ್ಲಿ ಮನೆ ಇರುತ್ತವೆ. ಮನೆಯ ನಂಬರ ೩೨೫ ಎಂದು ಇರಬಹುದು. ನಮ್ಮ ಕುಟುಂಬಕ್ಕೆ ೪ ಜಮೀನು ಮತ್ತು ಒಂದು ಮನೆ ಇರುತ್ತವೆಯೆ ಎಂದರೆ ಸಾಕ್ಷಿಯು ಹೌದು ನಮ್ಮ ಮಲತಾಯಿ ಮಕ್ಕಳ ಜೊತೆಗೆ ನಾವು ರಾಜಿ ಡಿಕ್ರಿ ಮಾಡಿಕೊಂಡಿರುತ್ತೇವೆ. ಅದರಲ್ಲಿ ಇನ್ನೆರಡು ಜಮೀನೂ ಕೂಡಾ ಅವರ ಪಾಲಿಗೆ ಹೋದವು ಇರುತ್ತವೆ ಎನ್ನುತ್ತಾರೆ.

೪. ಸರ್ವೆ ನಂಬರ ೨೩ ದಾವಾ ಜಮೀನು ಒಟ್ಟು ೨೩ ಎಕರೆ ೩೩ ಗುಂಟೆ ಇರುತ್ತದೆ. ಸರ್ವೆ ನಂಬರ ೫೯ ರ ದಾವಾ ಜಮೀನು ೧೪ ಎಕರೆ ೫ ಗುಂಟೆ ಇರುತ್ತದೆ. ಸರ್ವೆ ನಂಬರ ೬೦/೨ ರಲ್ಲಿ ೧೫ ಎಕರೆ ೨೭ ಗುಂಟೆ ದಾವಾ ಜಮೀನು ಇರುತ್ತದೆ. ಸರ್ವೆ ನಂಬರ ೬೩ ರಲ್ಲಿ ೩೫ ಗುಂಟೆ ದಾವಾ ಜಮೀನು ಇರುತ್ತದೆ. ಸಾಮಾನ್ಯವಾಗಿ ಒಂದು ಜಮೀನು ಮಾರಾಟ ಮಾಡುವಾಗ ಆತ ಅದರ ಸಂಪೂರ್ಣ ಮಾಲೀಕತ್ವ ಹೊಂದಿರಬೇಕು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.